ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 27–08–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಫಸ್ಟ್ ರೆಸ್ಪಾಂಡರ್ ಮೊಬೈಲ್ ಟ್ರೈನಿಂಗ್ ಅಪ್ಲಿಕೇಷನ್‌ನ ಬಿಡುಗಡೆ ಸಮಾರಂಭ.<br><br>ಮುಖ್ಯ ಅತಿಥಿ:<br><br>ಕೆ.ಜೆ. ಜಾರ್ಜ್,<br>ಗೃಹ ಸಚಿವರು.<br><br>ಅಧ್ಯಕ್ಷತೆ:<br><br>ಓಂ ಪ್ರಕಾಶ್,<br>ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್. | 28–08–2015<br>ಶುಕ್ರವಾರ<br>ಬೆಳಿಗ್ಗೆ<br>11–15 ಗಂಟೆಗೆ | ಪೊಲೀಸ್ ಕೇಂದ್ರ ಕಚೇರಿ, ಏಳನೇ ಮಹಡಿ, ಕಾನ್ಫರೆನ್ಸ್ ಹಾಲ್,<br>2, ನೃಪತುಂಗ ರಸ್ತೆ,<br>ಬೆಂಗಳೂರು – 560 001 |
| 2. | **PRESS MEET:**<br><br>**Shri Jayaram Raipura, Additional Commissioner of Income Tax, Bengaluru.** | **28-08-2015<br>Friday<br>at<br>12–30 p.m** | **Sharavathi, 1st Floor, Central Revenue Building, No. 1, Queens Road, Bangalore** |
| 3. | ಕರ್ನಾಟಕ ವಿಧಾನಸಭೆಯ 2015–16 ನೇ ಸಾಲಿನ ಅಂದಾಜುಗಳ ಸಮಿತಿಯ ಪ್ರಾರಂಭಿಕ ಸಭೆ: | 28–08–2015<br>ಶುಕ್ರವಾರ<br>ಮಧ್ಯಾಹ್ನ<br>12–30 ಗಂಟೆಗೆ | ಕೊಠಡಿ ಸಂಖ್ಯೆ 110,<br>ಮೊದಲನೇ ಮಹಡಿ,<br>ವಿಧಾನಸೌಧ, ಬೆಂಗಳೂರು. |

ನಿರ್ದೇಶಕರ ಪರವಾಗಿ

**ಪತ್ರಿಕಾ ಪ್ರಕಟಣೆ**

# ತಿಥಿ  ಚಿತ್ರದ ಕಥಾವಸ್ತು ನನ್ನ ಹೃದಯಕ್ಕೆ ಅತ್ಯಂತ ಹತ್ತಿರ – ರಾಮ್‌ರೆಡ್ಡಿ

ಬೆಂಗಳೂರು, ಆಗಸ್ಟ್ 27:

**"ತಿಥಿ"** ಸಿನಿಮಾ  ಕರ್ನಾಟಕದ ಸಂಸ್ಕೃತಿಗೆ ಬಹಳ ಹತ್ತಿರವಾಗಿದ್ದು, ಪ್ರಕೃತಿಯೊಂದಿಗೆ ನೈಜತೆಯನ್ನು ಬಿಂಬಿಸುವ ಪ್ರಯತ್ನ ಮಾಡಿದ್ದೇನೆ ಎಂದು ತಿಥಿ ಚಿತ್ರದ ನಿರ್ದೇಶಕ ರಾಮ್‌ರೆಡ್ಡಿ ನುಡಿದರು.

'ಲೋಕಾರ್ನೊ' ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಎರಡು ಪ್ರಶಸ್ತಿಗಳನ್ನು ಬಗಲಿಗೆ ಹಾಕಿಕೊಂಡ ಚಿತ್ರ 'ತಿಥಿ'ಯ ನಿರ್ದೇಶಕ ರಾಮ್‌ರೆಡ್ಡಿಯವರಿಗೆ  ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ ಇಂದು ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

ಸಂಸ್ಕೃತಿಗೆ ತೀರ ಹತ್ತಿರವಾಗಿರುವ ಪ್ರಾಮಾಣಿಕ ಕಥೆಗಳನ್ನು ಸಿನಿಮಾಗಳ ಮೂಲಕ ಹೇಳಲು ಮೊದಲಿನಿಂದಲೂ ಆಸಕ್ತಿಯಿತ್ತು. ತಿಥಿ  ಚಿತ್ರದ ಕಥಾವಸ್ತು ನನ್ನ ಹೃದಯದಿಂದ ಅತ್ಯಂತ ಸ್ವಾಭಾವಿಕವಾಗಿ  ಮೂಡಿಬಂದಿತ್ತು ಎಂದು ರಾಮ್‌ರೆಡ್ಡಿ ತಿಳಿಸಿದರು. ಈ ಚಿತ್ರವನ್ನು ನಿರ್ಮಿಸಲು ಸುದೀರ್ಘ 6 ವರ್ಷಗಳ ಅವಧಿ ಬೇಕಾಯಿತು ಎಂದ ಅವರು, ಸಿನಿಮಾ ನಿರ್ಮಾಣದಲ್ಲಿ ಹೆಚ್ಚಿನ ತಾಂತ್ರಿಕ ನೈಪುಣ್ಯತೆ  ಪಡೆಯಲು ಸಿನಿಮಾ ಶಾಲೆಯಲ್ಲಿ ಹೆಚ್ಚಿನ ತರಬೇತಿ ಪಡೆದೆ ಎಂದರು. ಚಿತ್ರದ ಚಿತ್ರೀಕರಣವನ್ನು ಮಂಡ್ಯ ಜಿಲ್ಲೆಯ ನೊದೆಕೊಪ್ಪಲು, ಬ್ಯಾಡರಹಳ್ಳಿ ಗ್ರಾಮಗಳಲ್ಲಿ ಮಾಡಲಾಗಿದೆ ಎಂದರು.

'ಲೋಕಾರ್ನೊ' ಚಿತ್ರೋತ್ಸವದಲ್ಲಿ ಕನ್ನಡ ಸಿನಿಮಾ, ಹಾಗೂ ಅದರ ಸಂಸ್ಕೃತಿಯನ್ನು ಸ್ವೀಕರಿಸಿದ ರೀತಿ ಅಭೂತಪೂರ್ವವಾಗಿತ್ತು ಎಂದು ರಾಮ್‌ರೆಡ್ಡಿ ವರ್ಣಿಸಿದರು. ಈ ಚಿತ್ರವನ್ನು ಮೆಚ್ಚಿ ಸರ್ಕಾರವೂ ಮನ್ನಣೆ ನೀಡುತ್ತಿರುವುದು ಅತ್ಯಂತ ಸಂತೋಷ ತಂದಿದೆ ಎಂದು ಅವರು ಹೇಳಿದರು.

ಚಿತ್ರ ವಿಮರ್ಶಕ ನರಹರಿರಾವ್ ಮಾತನಾಡಿ ತಿಥಿ ಸಿನಿಮಾದ ವಿಷಯ ರಾಷ್ಟ್ರೀಯ ಸಂಸ್ಕೃತಿಯನ್ನು ಹೊಂದಿದೆ. 4 ತಲೆಮಾರುಗಳು ತಿಥಿ ಎಂಬ ಆಚರಣೆಯಲ್ಲಿ ಹೇಗೆ ತಳಕು ಹಾಕಿಕೊಂಡಿವೆ ಎಂಬುವುದನ್ನು ತೋರಿಸಿದ್ದಾರೆ. ಕನ್ನಡ ಸಿನಿಮಾವನ್ನು ಜಾಗತಿಕ ಮಟ್ಟದಲ್ಲಿ ತೋರಿಸಿ, ಯಶಸ್ವಿಯಾಗಿದ್ದಾರೆ ಎಂದರು.

ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರಾದ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಅವರು ಮಾತನಾಡಿ ಕೇವಲ 26 ವರ್ಷ ಹರೆಯದ ರಾಮರೆಡ್ಡಿ ಅವರು ನಿರ್ಮಿಸಿರುವ "ತಿಥಿ" ಸಿನಿಮಾಕ್ಕೆ ಎರಡು ಪ್ರಶಸ್ತಿ ಸಂದಿರುವುದಕ್ಕೆ  ಅಭಿನಂದನೆ ಸಲ್ಲಿಸಿದರು.  ಕನ್ನಡ ಚಿತ್ರಗಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮತ್ತು ದೇಶದ ಎಲ್ಲಾ ರಾಜ್ಯಗಳಲ್ಲಿ ಮಾರುಕಟ್ಟೆಯನ್ನು ಸೃಷ್ಟಿಸುವ ನಿಟ್ಟಿನಲ್ಲಿ ಕರ್ನಾಟಕ ಚಲನಚಿತ್ರ ಅಕಾಡೆಮಿ ಎನ್.ಎಫ್.ಡಿ.ಸಿ.

ಮತ್ತು ಚಲನಚಿತ್ರೋತ್ಸವ ನಿರ್ದೇಶನಾಲಯದೊಂದಿಗೆ ಕರ್ನಾಟಕ ಚಲನಚಿತ್ರ ಅಕಾಡೆಮಿ ಮಾತುಕತೆ ನಡೆಸಿದೆ. ಅಕಾಡೆಮಿ ಹಮ್ಮಿಕೊಳ್ಳುವ ಬೆಳ್ಳಿ ಮಾತು – ಬೆಳ್ಳಿ ಸಿನಿಮಾ ಕಾರ್ಯಕ್ರಮದಲ್ಲಿ "ತಿಥಿ" ಚಿತ್ರವನ್ನು ಶೀಘ್ರದಲ್ಲಿಯೇ ಪ್ರದರ್ಶಿಸಲಾಗುವುದು ಎಂದರು.

ಚಿತ್ರ ನಿರ್ದೇಶಕ ಪಿ. ಶೇಷಾದ್ರಿ ಮಾತನಾಡಿ ಚಿತ್ರದ ಶೀರ್ಷಿಕೆ ಅಶುಭವನ್ನು ಸೂಚಿಸಿದರೂ, ಕರ್ನಾಟಕ ಹಾಗೂ ಕನ್ನಡಕ್ಕೆ ಶುಭವನ್ನು ತಂದಿದೆ,. 70 ರ ದಶಕದಲ್ಲಿದ್ದ ಕನ್ನಡ ಚಿತ್ರರಂಗದ ಸುವರ್ಣ ಯುಗ ಮತ್ತೆ ಪ್ರಾರಂಭವಾಗಿದೆ. ಇದು ನಿಜವಾಗಿಯೂ ಶುಭ ಸೂಚನೆ. ರಾಮ್‌ರೆಡ್ಡಿ ಅವರಂತಹ ಪ್ರತಿಭಾವಂತರಿಂದ ಇನ್ನೂ ಒಳ್ಳೆಯ ಚಿತ್ರಗಳು ಮೂಡಿಬರಲಿ ಎಂದು ಹಾರೈಸಿದರು.

ಕನ್ನಡ ಚಿತ್ರರಂಗದ ಹೆಮ್ಮೆಯ ಕಿರೀಟಕ್ಕೆ ಮತ್ತೊಂದು ಗರಿ ಸೇರ್ಪಡೆಯಾಗಿದೆ. ಕರ್ನಾಟಕದ ಪ್ರಥಮ ಮುಖ್ಯಮಂತ್ರಿ ಶ್ರೀ ಕೆ.ಸಿ.ರೆಡ್ಡಿ ಅವರ ಮೊಮ್ಮಗ ರಾಮ್‌ರೆಡ್ಡಿ ತಮ್ಮ ಪ್ರಥಮ ಚಿತ್ರಕ್ಕೆ ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದು ಕನ್ನಡಕ್ಕೆ ಹೆಮ್ಮೆ ತಂದಿದ್ದಾರೆ. ರಾಮ್‌ರೆಡ್ಡಿ ಕುರಿತು ಅಭಿಮಾನ ತುಂಬಿ ಬಂದಿದೆ. ಅರ್ಥಶಾಸ್ತ್ರದ ಅಭ್ಯಾಸಿಯಾದರೂ ಸಿನಿಮಾವನ್ನು ತಮ್ಮ ಆಸಕ್ತಿಯ ಕ್ಷೆತ್ರವನ್ನಾಗಿ ಆಯ್ಕೆಮಾಡಿಕೊಂಡು, ಸಾಧನೆಮಾಡಿರುವ ರಾಮ್‌ರೆಡ್ಡಿ ಅಭಿನಂದನಾರ್ಹರು" ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರಾದ ಶ್ರೀ ಎನ್.ಆರ್.ವಿಶುಕುಮಾರ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ರಾಮ್‌ರೆಡ್ಡಿ ಅವರಿಗೆ ತಮ್ಮ ಅಭಿನಂದನೆಗಳನ್ನು ತಿಳಿಸಿರುವ ವಿಶುಕುಮಾರ್ ಅವರು, ಶ್ರೀಯುತರು ಇನ್ನಷ್ಟು ಒಳ್ಳೆಯ ಚಿತ್ರಗಳನ್ನು ಕನ್ನಡಕ್ಕೆ ನೀಡಲಿ ಎಂದು ಹಾರೈಸಿದ್ದಾರೆ.

ಅಶ್ವಿನಿ

## ಏಕಲವ್ಯ ಪ್ರಶಸ್ತಿ:
## ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ಬೆಂಗಳೂರು, ಆಗಸ್ಟ್ 27 (ಕರ್ನಾಟಕ ವಾರ್ತೆ:**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಏಕಲವ್ಯ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಸೆಪ್ಟೆಂಬರ್ 5 ರವರೆಗೆ ವಿಸ್ತರಿಸಿದೆ.

ಏಕಲವ್ಯ ಪ್ರಶಸ್ತಿಗಾಗಿ ರೂಪಿಸಿರುವ ಮಾರ್ಗಸೂಚಿಗಳಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಿ ಮಾರ್ಗಸೂಚಿಯನ್ನು ಪರಿಷ್ಕರಿಸಿರುವ ಹಿನ್ನೆಲೆಯಲ್ಲಿ ಅರ್ಜಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸಲಾಗಿದ್ದು, ಪರಿಷ್ಕೃತ ಮಾರ್ಗಸೂಚಿ ಮತ್ತು ಅರ್ಜಿ ನಮೂನೆಯನ್ನು ವೆಬ್‌ಸೈಟ್ ವಿಳಾಸ **www.karnatakayouthportal.in** ನಿಂದ ಪಡೆದು ಆನ್‌ಲೈನ್ ಮೂಲಕವೇ ಅರ್ಜಿಗಳನ್ನು ಭರ್ತಿಮಾಡಿ ಸಲ್ಲಿಸಬಹುದಾಗಿದೆ ಎಂದು ಇಲಾಖೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೂರ್ಣಿಮ:ಜಿಪಿಆರ್.

## ನಾರೀಶಕ್ತಿ ಪುರಸ್ಕಾರ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಬೆಂಗಳೂರು, ಆಗಸ್ಟ್ 27 (ಕರ್ನಾಟಕ ವಾರ್ತೆ:**

ರಾಜ್ಯ ಮಟ್ಟದಲ್ಲಿ ಮಹಿಳೆಯರ ಅಭಿವೃದ್ಧಿ ಹಾಗೂ ಅವರ ಸರ್ವತೋಮುಖ ಬೆಳವಣಿಗೆಗೆ ಅವಿರತವಾಗಿ ಶ್ರಮಿಸುತ್ತಿರುವ ಸಂಸ್ಥೆಗಳು ಮತ್ತು ವ್ಯಕ್ತಿಗಳಿಂದ ನಾರೀಶಕ್ತಿ ಪುರಸ್ಕಾರ್ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಕೇಂದ್ರ ಸರ್ಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮುಖಾಂತರ ಮಾರ್ಚ್ 8 ರಂದು ಮಹಿಳಾ ದಿನಾಚರಣೆಯಂದು ಒಟ್ಟು 20 ನಾರೀಶಕ್ತಿ ಪುರಸ್ಕಾರ್ ಪ್ರಶಸ್ತಿಯನ್ನು ಪ್ರದಾನ ಮಾಡಲಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರನ್ನು ಅಥವಾ ವೆಬ್‌ಸೈಟ್ wed.nic.in ನಲ್ಲಿ ಪಡೆಯಬಹುದಾಗಿದೆ.

ಪೂರ್ಣಿಮ:ಜಿಪಿಆರ್.

## ವಿದ್ಯಾರ್ಥಿ ವೇತನದ ಅವಧಿ ವಿಸ್ತರಣೆ

**ಬೆಂಗಳೂರು, ಆಗಸ್ಟ್ 27 (ಕರ್ನಾಟಕ ವಾರ್ತೆ:**

ಅಲ್ಪಸಂಖ್ಯಾತರ ನಿರ್ದೇಶನಾಲಯದ ವತಿಯಿಂದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧರು, ಸಿಖ್ ಮತ್ತು ಪಾರ್ಸಿ ಸಮುದಾಯಗಳ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ವಿದ್ಯಾರ್ಥಿ ವೇತನದ ಅವಧಿಯನ್ನು ವಿಸ್ತರಣೆ ಮಾಡಿದೆ.

1 ರಿಂದ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಸೆಪ್ಟೆಂಬರ್ 10 ರವರೆಗೆ, 9 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಅಕ್ಟೋಬರ್ 5 ರವರೆಗೆ, ಪದವಿಪೂರ್ವ ಮತ್ತು ಮೆರಿಟ್ ಕಂ ಮೀನ್ಸ್ ವಿದ್ಯಾರ್ಥಿಗಳಿಗೆ, ಅಕ್ಟೋಬರ್ 15 ರವರೆಗೆ ಹಾಗೂ ನವೀಕರಣಕ್ಕೆ ನವೆಂಬರ್ 15 ರವೆಗೆ ಅವಧಿಯನ್ನು ವಿಸ್ತರಣೆ ಮಾಡಲಾಗಿದೆ. ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ www.gokdom.kar.nic.in ಅನ್ನು ವೀಕ್ಷಿಸಬಹುದಾಗಿದೆ ಎಂದು ನಿರ್ದೇಶನಾಲಯದ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೂರ್ಣಿಮ:ಜಿಪಿಆರ್.

## ಸೆಪ್ಟೆಂಬರ್ 6 ರಿಂದ ನಗರದಲ್ಲಿ

## 38 ನೇ ಪಾಟಾ ಪ್ರವಾಸ ಸಮ್ಮೇಳನ – ಆರ್. ವಿ. ದೇಶಪಾಂಡೆ

**ಬೆಂಗಳೂರು, ಆಗಸ್ಟ್ 27 (ಕರ್ನಾಟಕ ವಾರ್ತೆ:**

ಪ್ರವಾಸೋದ್ಯಮ ಇಲಾಖೆ ವತಿಯಿಂದ ಸೆಪ್ಟೆಂಬರ್ 6 ರಿಂದ ಮೂರುದಿನಗಳ ಕಲಾ 38ನೇ ಪಾಟಾ ಪ್ರವಾಸಿ ಸಮ್ಮೇಳನವನ್ನು ನಗರದ ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಏರ್ಪಡಿಸಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವ ಆರ್. ವಿ. ದೇಶಪಾಂಡೆ ಅವರು ತಿಳಿಸಿದರು.

ನಗರದ ಲಲಿತ ಅಶೋಕ್ ಹೋಟೆಲ್‌ನಲ್ಲಿ ಇಂದು ಏರ್ಪಡಿಸಲಾಗಿದ್ದ ಪಾಟಾ ಪ್ರವಾಸಿ ಸಮ್ಮೇಳನ 2015 ರ ಪೂರ್ವಸಿದ್ಧತಾ ಅನಾವರಣ ಹಾಗೂ ಮಾಧ್ಯಮ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಚಿವರು ಪ್ರವಾಸೋದ್ಯಮದ ಅಭಿವೃದ್ಧಿಗೆ ರಾಜ್ಯದಲ್ಲಿ ಸಾಕಷ್ಟು ಅವಕಾಶಗಳಿದೆ. ಹಾಗೆಯೇ ಪ್ರವಾಸೋದ್ಯಮದಿಂದ ಬಹಳಷ್ಟು ಮಂದಿಗೆ ಉದ್ಯೋಗವನ್ನು ಕಲ್ಪಿಸಬಹುದಾಗಿದ್ದು, ಸರ್ಕಾರಕ್ಕೂ ಸಾಕಷ್ಟು ಆದಾಯ ತಂದುಕೊಡಲಿದೆ ಎಂದರು.

ಸಣ್ಣ ಸಣ್ಣ ರಾಷ್ಟ್ರಗಳು ಕೂಡ ಪ್ರವಾಸೋದ್ಯಮದಿಂದ ಹೆಚ್ಚಿನ ಆದಾಯಗಳಿಸುತ್ತವೆ ಎಂದ ಸಚಿವರು ನಗರದಲ್ಲಿ ನಡೆಯುವ ಪಾಟಾ ಪ್ರವಾಸಿ ಸಮ್ಮೇಳನದಲ್ಲಿ 61 ದೇಶಗಳು, ದೇಶದ ಎಲ್ಲಾ ರಾಜ್ಯಗಳ 1200 ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಸಚಿವರು ತಿಳಿಸಿದರು.

ಈ ಸಮ್ಮೇಳನದಲ್ಲಿ ಹೂಡಿಕೆ ಸಮಾವೇಶವನ್ನು ಆಯೋಜಿಸಲಾಗಿದೆ ಎಂದ ಸಚಿವ ಆರ್.ವಿ.ದೇಶಪಾಂಡೆ ಅವರು ಜಾಗತಿಕ ವೀಕ್ಷಕರಿಗೆ ಕರ್ನಾಟಕದ ವೈವಿಧ್ಯಮಯ ಹಾಗೂ ವೈಭವಯುತ ಪ್ರವಾಸಿ ಆಕರ್ಷಣೀಯ

ಸ್ಥಳಗಳನ್ನು ಹಾಗೂ ಇತರೆ ಪ್ರೇಕ್ಷಣೀಯ ಸ್ಥಳಗಳನ್ನು ಪರಿಚಯಿಸುವ ಕೆಲಸವನ್ನು ಈ ಸಮ್ಮೇಳನದ ಮೂಲಕ ಮಾಡಲಾಗುವುದು ಎಂದು ಸಚಿವರು ತಿಳಿಸಿದರು.

ಕಳೆದ ಎರಡು ವರ್ಷಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರ ಹೆಚ್ಚಿನ ಅನುದಾನ ನೀಡಿದ್ದು, ಪ್ರವಾಸಿ ತಾಣಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಪಾಟಾ ಟ್ರಾವಲ್ಸ್ ಮಾರ್ಟನ ಕಾರ್ಯನಿರ್ವಾಹಕ ನಿರ್ದೇಶಕ ರುನಿಕ್ ಸಿಂಗ್, ಕರ್ನಾಟಕ ವಿಷನ್ ಗ್ರೂಪನ್ ಅಧ್ಯಕ್ಷರಾದ ಮೋಹನದಾಸ್ ಪೈ ಮಾತನಾಡಿದರು.

ಸರ್ಕಾರದ ಮುಖ್ಯ ಕಾರ್ಯದರ್ಶಿ ಕೌಶಿಕ್ ಮುಖರ್ಜಿ, ಅಪರ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರಾದ ಲತಾ ಕೃಷ್ಣರಾವ್, ಒಳಾಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಸರ್ಕಾರ ಅಪರ ಕಾರ್ಯದರ್ಶಿಗಳು ಆದ ಪಟ್ಟಾನಾಯಕ್, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ರತ್ನಪ್ರಭಾ, ಪ್ರವಾಸೋದ್ಯಮ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಪ್ರತಾಪ್‌ಸಿಂಗ್ ಕರೋಲಾ, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಧಾನ ಕಾರ್ಯದರ್ಶಿ ಬಿ. ಜಿ. ನಂದಕುಮಾರ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್. ಆರ್. ವಿಶುಕುಮಾರ್, ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರಾದ ಸತ್ಯವತಿ, ಚುನಾಯಿತ ಜನ ಪ್ರತಿನಿಧಿಗಳು ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಪುಟ್ಟಸ್ವಾಮಯ್ಯ:ಜಿಪಿಆರ್.